ಬಸ್ಸುಗಳ ತೊಂದರೆಯಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಅ) ಸರ್ಕಾರವು ಸದರಿ ತಾಲ್ಲೂಕಿಗೆ ಮಂಜೂರು ಮಾಡಿದ ಡಿಪೋ ಹಾಗೂ ಆ ದಿಸೆಯಲ್ಲಿ ನಡೆಯುತ್ತಿರುವ ಕೆಲಸ ಯಾವ ಹಂತದಲ್ಲಿದೆ.

ಇ) ಇನ್ನೂ ಎಷ್ಟು ದಿನಗಳಲ್ಲಿ ಸದರಿ ಡಿಪೋ ಸೌಲಭ್ಯ ಲಭ್ಯವಾಗಲಿದೆ?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಹೌದು.

ಆ) ಈ ಉದ್ದೇಶಕ್ಕಾಗಿ ಮೂಕನಹಳ್ಳಿ ಗ್ರಾಮದಲ್ಲಿನ ಸರ್ವೆ ಸಂಖ್ಯೆ 120:2 ಮತ್ತು 120:3ಗಳಲ್ಲಿನ 5 ಎಕರೆ 18 ಗುಂಟೆ ನಿವೇಶನವನ್ನು ಭೂಸ್ವಾಧೀನಗೊಳಿಸಲು ಜಿಲ್ಲಾಧಿಕಾರಿ, ಮೈಸೂರು ಇವರನ್ನು ಕೋರಲಾಗಿದೆ.

ಇ) ನಿವೇಶನವನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಘಟಕದ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಸಿ.ಹೆಚ್.ವಿಜಯಶಂಕರ್:- ಮೂಕನಹಳ್ಳಿ ಗ್ರಾಮದ ಸರ್ವೆ ನಂ 120:2 120:3 ಇಲ್ಲಿ 5 ಎಕರೆ 18 ಗುಂಟೆ ನಿವೇಶನವನ್ನು ಭೂಸ್ವಾಧೀನಗೊಳಿಸಲು ಜಿಲ್ಲಾಧಿಕಾರಿ ಮೈಸೂರು ಇವರನ್ನು ಕೋರಲಾಗಿದೆ ಎಂದು ಉತ್ತರ ನೀಡಿದ್ದಾರೆ. ನನಗೆ ತಿಳಿದ ಸ್ಪಷ್ಟ ಮಾಹಿತಿ ಪ್ರಕಾರ ಈ ಭೂ ಸ್ವಾಧೀನ ಪ್ರಕ್ರಿಯೆ ಈಗಾಗಲೆ ಪೂರ್ಣಗೊಂಡಿದೆ. ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಈ ಕೆಲಸವನ್ನು ತಕ್ಷಣ ಪ್ರಾರಂಭ ಮಾಡಲಿಕ್ಕೆ ಇಲಾಖಾ ಅಧಿಕಾರಿಗಳಿಗೆ ಸೂಚನೆ ಕೊಡಬೇಕು ಮತ್ತು ಈ ಕೆಲಸವನ್ನು ತಕ್ಷಣ ಪ್ರಾರಂಭ ಮಾಡಿಸಿಕೊಡಬೇಕು.

ಶ್ರೀ ಪಿ.ಜಿ.ಆರ್.ಸಿಂಧ್ಯ:- ನಗರ ಮತ್ತು ಗ್ರಾಮೀಣ ಸಾರಿಗೆಯನ್ನು ಉತ್ತಮಪಡಿಸುವ ದೃಷ್ಟಿಯಿಂದಾಗಿ ಅಲ್ಲಿ ಘಟಕದ ಅವಶ್ಯಕತೆ ಇತ್ತು ಅಲ್ಲಿ ಪ್ರಾರಂಭ ಮಾಡಬೇಕೆಂದು ಸಾರಿಗೆ ಸಂಸ್ಥೆಯ ಆಡಳಿತ ಮಂಡಲಿಯವರು ಈಗಾಗಲೇ ನಿರ್ಧಾರ ಮಾಡಿ ಕ್ರಮವನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಸರಕಾರಿ ಜಮೀನು ಇಲ್ಲದೇ ಇರುವುದರಿಂದ 5 ಎಕರೆಗೂ ಹೆಚ್ಚು ಖಾಸಗಿ ಜಮೀನನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಕ್ರಮವನ್ನು ಜರುಗಿಸಿ ಈಗಾಗಲೇ 1 ಲಕ್ಷ 60 ಸಾವಿರ ರೂಪಾಯಿಯನ್ನು ಠೇವಣಿ ಇಟ್ಟಿದ್ದಾರೆ. ಅಲ್ಲಿರತಕ್ಕಂತಹ ಲ್ಯಾಂಡ್ ಅಕ್ವಿಸಿಷನ್ ಅಧಿಕಾರಿ ಇನ್ನು ಎಷ್ಟು ಹಣ ಬೇಕು ಎಂದು ಕೇಳಿದ್ದಾರೆ. ಅದನ್ನು ತಕ್ಷಣ ಬಿಡುಗಡೆ ಮಾಡಲಿಕ್ಕೆ ನಾವು ತಯಾರು ಇದ್ದೇವೆ. ಈ ಅಧಿವೇಶನ ಮುಗಿದ ನಂತರ ಅಕ್ವಿಸಿಷನ್ ಪ್ರೋಸಸ್ ಅನ್ನು ಪೂರ್ತಿ ಮಾಡಿಸಿ ಹಣವನ್ನು ಸಹ ಕಟ್ಟಿ ಕೆಲಸ ಪ್ರಾರಂಭ ಮಾಡತಕ್ಕಂತಹ ಕ್ರಿಯೆಯನ್ನು ಈ ವರ್ಷವೇ ಪ್ರಾರಂಭ ಮಾಡಿಸುತ್ತೇನೆ.

ವಿಷಯ:- ರಸ್ತೆ ಸಾರಿಗೆ ಸಂಸ್ಥೆಯ ವಿಭಾಗ ಪ್ರಾರಂಭ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 159 (1187)

ಶ್ರೀ ಸಂಗಣ್ಣ ಕರಡಿ (ಕೊಪ್ಪಳ):- ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಕೊಪ್ಪಳದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗವನ್ನು ಪ್ರಾರಂಭಿಸುವ ಉದ್ದೇಶವು ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ ಇದನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಪಿ.ಜಿ.ಆರ್.ಸಿಂಧ್ಯಾ (ಸಾರಿಗೆ ಸಚಿವರು):-

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಶ್ರೀ ಸಂಗಣ್ಣ ಕರಡಿ:- ಕೊಪ್ಪಳದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವಿಭಾಗವನ್ನು ಪ್ರಾರಂಭಿಸುವ ಉದ್ದೇಶವು ಸರಕಾರಕ್ಕೆ ಇದೆಯೇ ಎಂದು ಕೇಳಿದ್ದಕ್ಕೆ ಇಲ್ಲವೆಂದು ಹೇಳಿದ್ದಾರೆ. ಹಾಗಿದ್ದಲ್ಲಿ ಯಾವಾಗ ಇದನ್ನು ಪ್ರಾರಂಭಿಸಲಾಗುವುದು ಎಂದು ಕೇಳಿದ್ದಕ್ಕೆ ಉದ್ಭವಿಸುವುದಿಲ್ಲವೆಂದು ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿರುವಂತೆ, ಕೊಪ್ಪಳ ಕ್ಷೇತ್ರ ಜಿಲ್ಲೆಯಾಗತಕ್ಕಂತಹ ಸ್ಥಳ ಮತ್ತು ಅಲ್ಲಿ ಸಾರಿಗೆ ಒತ್ತಡ ಹೆಚ್ಚು ಇರುವುದನ್ನು ತಾವು ಗಮನಿಸಿದ್ದೀರಿ. ಅಲ್ಲಿ ಸೋರಿಕೆ ಪ್ರಮಾಣ ಹೆಚ್ಚಾಗುತ್ತಿದೆ. ಸಾರಿಗೆ ವ್ಯವಸ್ಥೆ ಉತ್ತಮ ಸ್ಥಿತಿಯಲ್ಲಿ ಇಲ್ಲ. ಕುಷ್ಟಗಿ, ಯಲಬುರ್ಗ, ಕೊಪ್ಪಳ - ಇಲ್ಲಿ ವಿಭಾಗವನ್ನು ಪ್ರಾರಂಭಿಸಿದರೆ ಸೋರಿಕೆಯನ್ನು ತಡೆಗಟ್ಟಬಹುದು. ಮತ್ತು ಸಾರಿಗೆ ವ್ಯವಸ್ಥೆಯನ್ನು ಉತ್ತಮಪಡಿಸಬಹುದು. ತಾವು ದಕ್ಷತೆಯನ್ನು ಹೊಂದಿದಂತಹ ಸಚಿವರು ಇರುವುದರಿಂದ ಈ ಒಂದು ಡಿವಿಜನ್ ಅನ್ನು ಕೊಪ್ಪಳದಲ್ಲಿ ಪ್ರಾರಂಭಿಸುತ್ತೀರಾ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಮಾನ್ಯ ಸಂಗಣ್ಣನವರು ಹೇಳಿರತಕ್ಕಂಥಾ ವಿಚಾರ ಸರಿ ಇದೆ. ಕೊಪ್ಪಳದಲ್ಲಿ ಇನ್ನೂ ಉತ್ತಮವಾದ ಸಾರಿಗೆ ವ್ಯವಸ್ಥೆ ಮಾಡಲಿಕ್ಕೆ ಸಾಧ್ಯತೆ ಇದೆ. ಆ ದೃಷ್ಟಿಯಲ್ಲಿ ನಾನು ಪ್ರಯತ್ನ ಮಾಡುತ್ತೇನೆ. ಆದರೆ ಹೊಸ ವಿಭಾಗವನ್ನು ಅಲ್ಲಿ ತೆರೆಯುವುದರಿಂದ ಸಾರಿಗೆ ಸಂಸ್ಥೆ ಉತ್ತಮವಾಗುತ್ತದೆಂದು ನಾನು ತಿಳಿದುಕೊಂಡಿಲ್ಲ. ಸಾರಿಗೆ ಸಂಸ್ಥೆಗೆ ಇವತ್ತು ಮುಖ್ಯವಾಗಿ ಇರತಕ್ಕಂತಹ ಸಮಸ್ಯೆ ಎಂದರೆ ಕಾಸ್ಟ್ ಆಫ್ ಆಪರೇಷನ್ ಅನ್ನು ನಾವು ಕಡಿಮೆ ಮಾಡಬೇಕಾಗುತ್ತದೆ. ಒಂದು ಡಿವಿಜನ್ ಅನ್ನು ಹೆಚ್ಚು ಮಾಡಿದ ತಕ್ಷಣವೇ ಕಾಸ್ಟ್ ಆಫ್ ಆಪರೇಷನ್ ಹೆಚ್ಚಾಗುತ್ತದೆಯೇ ಹೊರತು ಅದು ಕಡಿಮೆಯಾಗುವುದಿಲ್ಲ. ಆ ದೃಷ್ಟಿಯಿಂದ ನಿಮಗೆ ಇಷ್ಟು ಭರವಸೆ ಕೊಡುತ್ತೇನೆ. ಗದಗ್ ಡಿವಿಜನ್ ಮತ್ತು ರಾಯಚೂರು ಡಿವಿಜನ್ ಮಧ್ಯೆ ಇರತಕ್ಕಂತಹ ಕೊಪ್ಪಳದಲ್ಲಿ ಇವತ್ತಲ್ಲ ನಾಳೆ ಒಂದು ವಿಭಾಗವನ್ನು ನಾವು ಮಾಡಬೇಕಾಗಬಹುದು. ಆದರೆ ಇವತ್ತಿನ ಸ್ಥಿತಿಯಲ್ಲಿ

ಇಡೀ ಸಾರಿಗೆ ಸಂಸ್ಥೆಯನ್ನು 4 ಸೆಪರೇಟ್ ಇಂಡಿಪೆಂಡೆಂಟ್ ಕಾರ್ಪೊರೇಷನ್ಸ್ ಆಗಿ ಡಿವೈಡ್ ಮಾಡಬೇಕೆನ್ನುವ ಉದ್ದೇಶ ಇಟ್ಟುಕೊಂಡಿರುವುದರಿಂದ ಈ ವಿಭಾಗದಿಂದ ಹೆಚ್ಚು ಉಪಯೋಗವಾಗುವುದಿಲ್ಲವೇನೋ ಎನ್ನುವುದು ಸರಕಾರದ ಅಭಿಪ್ರಾಯ ಇದೆ. ಕೊಪ್ಪಳದಲ್ಲಿ ಇದನ್ನು ಉತ್ತಮಪಡಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕರಡಿ ಸಂಗಣ್ಣ:- ಮುಂದೆಯಾದರೂ ವಿಭಾಗ ಮಾಡುವ ಸಂದರ್ಭದಲ್ಲಿ ಕೊಪ್ಪಳವನ್ನು ಆ ವಿಭಾಗಕ್ಕೆ ಸೇರಿಸುತ್ತೀರೋ?

ಶ್ರೀ ಪಿ.ಜಿ.ಆರ್.ಸಿಂಧ್ಯ:- ಪರಿಶೀಲಿಸುತ್ತೇನೆ.

ಶ್ರೀ ಶ್ರೀರಂಗದೇವರಾಯಲು:- ಗಂಗಾವತಿ, ಕೊಪ್ಪಳ, ಕುಷ್ಟಗಿ ಯಲಬುರ್ಗ - ಈ 4 ತಾಲ್ಲೂಕು ಸೇರಿ ಡಿವಿಜನ್ ಮಾಡಬೇಕೆಂದು ನಾವು ಒತ್ತಡ ತಂದಿದ್ದೇವೆ. ನಮಗೆ ಯಲಬುರ್ಗದಿಂದ ರಾಯಚೂರಿಗೆ ಹೋಗಬೇಕಾದರೆ ಸುಮಾರು 200 ಕಿಲೋ ಮೀಟರ್ ಆಗುತ್ತದೆ. ಡಿವಿಜನಲ್ ಕಂಟ್ರೋಲರ್ ಅದನ್ನು ಕಂಟ್ರೋಲ್ ಮಾಡುವುದು ಬಹಳ ಕಷ್ಟವಾಗುತ್ತದೆ. 4 ತಾಲ್ಲೂಕು ಆದರೆ ಸಣ್ಣ ಏರಿಯಾ ಆದ ಕಾರಣ ಡಿವಿಜನಲ್ ಕಂಟ್ರೋಲರಿಗೆ ಸಾಕಷ್ಟು ಗಮನ ಕೊಡಲಿಕ್ಕೆ ಅನುಕೂಲವಾಗುತ್ತದೆ. ದಯಮಾಡಿ ಕೊಪ್ಪಳದಲ್ಲಿ ಮಾಡಲಿಕ್ಕೆ ಒಪ್ಪಬೇಕೆಂದು ವಿನಂತಿಸುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ:- ಇವತ್ತಿನ ಪರಿಸ್ಥಿತಿಯಲ್ಲಿ ಕೆ.ಎಸ್.ಆರ್.ಟಿ.ಸಿ.ಯನ್ನು 4 ಇಂಡಿಪೆಂಡೆಂಟ್ ಕಾರ್ಪೊರೇಷನ್ಸ್ ಆಗಿ ಡಿವಿಜನ್‌ಗಳನ್ನು ಕಾರ್ಪೊರೇಷನ್ ಮಾಡಬೇಕೆಂಬ ಉದ್ದೇಶ ಇಟ್ಟುಕೊಂಡಿರತಕ್ಕಂತಹ ಸಂದರ್ಭವೇ ನಾವು ಮಾಡುತ್ತಿರತಕ್ಕಂಥಾದ್ದೆ ಕಾಸ್ಟ್ ಆಫ್ ಆಪರೇಷನ್ ಕಡಿಮೆ ಮಾಡಬೇಕು ಎಂದು. ಅರ್ನಿಂಗ್ 9 ಕಿಲೋ ಮೀಟರ್ ಆದರೆ ನಮಗೆ ಕಾಸ್ಟ್ 11 ರೂಪಾಯಿ ಇದೆ. If KSRTC bus moves on the road, for each Kilometre, we ar losing 90 ps. ಇಂತಹ ಸಂದರ್ಭದಲ್ಲಿ ನಾವು ಕಾಸ್ಟ್ ಆಫ್ ಆಪರೇಷನ್ ಅನ್ನು ಕಡಿಮೆ ಮಾಡಬೇಕಾಗುತ್ತದೆ. ಡಿವಿಜನ್ ಅನ್ನು ಈ ವರ್ಷದಲ್ಲಿ ಮಾಡತಕ್ಕಂಥಾದ್ದು ಕಷ್ಟವಾಗುತ್ತದೆ. ಇಂಡಿಪೆಂಡೆಂಟ್ ಕಾರ್ಪೊರೇಷನ್ ಕಲ್ಬುರ್ಗಿ, ಹುಬ್ಬಳ್ಳಿಯಲ್ಲಿ ಆದಮೇಲೆ ಇದರ ಬಗ್ಗೆ ಪರಿಶೀಲನೆ ಮಾಡಬಹುದು.

ವಿಷಯ:- ನಗರ ಪ್ರದೇಶದ ಸರ್ವೆ ಕಾರ್ಯ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 160 (1159)

ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲಾ):- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದಲ್ಲಿ ನಗರ ಪ್ರದೇಶದ ಸರ್ವೆ ಯಾವ ವರ್ಷದಿಂದ ಆರಂಭವಾಗಿದೆ?

ಆ) ಸಂಪೂರ್ಣ ನಗರ ವಿಸ್ತೀರ್ಣದ ಸರ್ವೆ ಇದುವರೆವಿಗೂ ನಗರ ಸರ್ವೆ